**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ</u>**

**<u>ಸಿ.ಸಿ.ನಂಃ 379/2022</u>**

| | |
|---|---|
| ಪಿರ್ಯಾರ್ದುದಾರಃ | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸ ಠಾಣೆ |
| | **ವಿರುದ್ಧ** |
| ಆರೋಪಿ | ಭರತ @ ಭರತೇಶ ತಂದೆ ಸಿದ್ದರಾಮ @ ಸಿದ್ರಾಮಪ್ಪಾ ಪಾಟೀಲ, ವಃ 37 ವರ್ಷ, ಉಃ ಒಕ್ಕಲುತನ, ಸಾಃ ಹಡಲಗಿ, ತಾಃ ಆಳಂದ,ಜಿಃ ಕಲ್ಬುರ್ಗಿ. |

**<u>ದೋಷಾರೋಪಣೆ</u>**

ಶ್ರೀಮತಿ ತಯ್ಯಬಾ ಸುಲ್ತಾನಾ, ಬಿ.ಎ., ಎಲ್‌ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿಯಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 24-02-2022ರಂದು ಮಧ್ಯಾಹ್ನ 03-00 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಜೇವರ್ಗಿ ಪಟ್ಟಣದ ಶ್ರೀ ನೂರಂದೇಶ್ವರ ಶಾಲೆಯ 8ನೇ ತರಗತಿಯ ಕೋಣೆಯ ಮುಂದುಗಡೆ ಆರೋಪಿಯಾದ ನೀವು ಚಾಸಾ-1ರವರನ್ನು ಹೊರಗಡೆ ಬಾ ನಿನ್ನೊಂದಿಗೆ ಮಾತನಾಡುವುದು ಇದೆ ಎಂದು ಕರೆದಾಗ ಚಾಸಾ-1ರವರು ಸದರಿ ಕೋಣೆಯ ಬಾಗಿಲ ಹತ್ತಿರ ಬಂದು ನಿಂತಾಗ ಆರೋಪಿಯಾದ ನೀವು ಚಾಸಾ-1ರವರನ್ನು ನೂಕಿಸಿಕೊಟ್ಟು ಕಪಾಳದ ಮೇಲೆ ಬೆನ್ನಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಆರೋಪಿಯಾದ ನೀವು ಚಾಸಾ-1ರವರ ಮೈಮೇಲಿನ ಬಟ್ಟೆ ಹಿಡಿದು ಜಗ್ಗಿ ಚಾಸಾ-1 ರವರ ಮೇಲೆ ಅಪರಾಧಿಕ ಬಲಪ್ರಯೋಗವನ್ನುಂಟು ಮಾಡಿದ ಕಾರಣ ಹಾಗೂ ಅವರ ಹೆಣ್ಣುತನಕ್ಕೆ ಅಗೌರವ ತೋರಿಸಿದ ಕಾರಣ

ಭಾರತೀಯ ದಂಡ ಸಂಹಿತೆ ಕಲಂ 354 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.



ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಆರೋಪಿಯಾದ ನೀವು ಚಾಸಾ-1ರವರಿಗೆ ನೀನು ನನಗೆ ಮದುವೆ ಮಾಡಿಕೊಂಡರೆ ಸರಿ ಇಲ್ಲವಾದರೆ ನಿನಗೆ ಹೊಡೆದು ಖಲಾಸ್ ಮಾಡುತ್ತೇನೆ ನಿನಗೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಆರೋಪಿಯಾದ ನೀವು ಚಾಸಾ-1ರವರು ಬಿಡಿಸಿಕೊಂಡು ಹೋಗುವಾಗ ಚಾಸಾ-1ರವರನ್ನು ನೀನು ಎಲ್ಲಿಗೆ ಹೋಗುತ್ತೀಯಾ ಅಂತಾ ಮುಂದೆ ಹೋಗದಂತೆ ತಡೆದು ನಿಲ್ಲಿಸಿ, ಅಕ್ರಮ ಪ್ರತಿಬಂಧನವನ್ನುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 341 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಆರೋಪಿಯಾದ ನೀವು ಚಾಸಾ-1ರವರಿಗೆ ಏ ರಂಡಿ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಚಾಸಾ-1 ರವರಿಗೆ ಅವಮಾನವನ್ನುಂಟು ಮಾಡಿ ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ಸ್ಥಳಃ ಜೇವರ್ಗಿ
ದಿಃ 06-08-2025

(ಶ್ರೀಮತಿ ತಯ್ಯಬಾ ಸುಲ್ತಾನಾ)
ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ**

**ಸಿ.ಸಿ.ನಂಃ 379/2022**

| | |
|---|---|
| ಪಿರ್ಯಾರ್ದುದಾರಃ | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸ ಠಾಣೆ |
| | **ವಿರುದ್ಧ** |
| ಆರೋಪಿ | ಭರತ @ ಭರತೇಶ ತಂದೆ ಸಿದ್ದರಾಮ @ ಸಿದ್ರಾಮಪ್ಪಾ ಪಾಟೀಲ, ವಃ 37 ವರ್ಷ, ಉಃ ಒಕ್ಕಲುತನ, ಸಾಃ ಹಡಲಗಿ, ತಾಃ ಆಳಂದ,ಜಿಃ ಕಲ್ಬುರ್ಗಿ. |

**ದೋಷಾರೋಪಣೆ**

ಪ್ರಶ್ನೆ.1:- ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ:-

ಪ್ರಶ್ನೆ.2:- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಉತ್ತರ:-

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಜೇವರ್ಗಿ
ದಿಃ 06-08-2025

(ಶ್ರೀಮತಿ ತಯ್ಯಬಾ ಸುಲ್ತಾನಾ)
ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ